**ಈ ವಾರದ ಪಾಠವನ್ನು ಸಬ್ಬತ್ತಿಗಾಗಿ ಅಧ್ಯಯನ ಮಾಡಿರಿ, ಫೆಬ್ರವರಿ 17.**

**ಪಾಠ 7** **ಫೆಬ್ರವರಿ 10–16**

# ದೇವರೊಂದಿಗೆ ಪ್ರಾಮಾಣಿಕತೆ

ಸಬ್ಬತ್ತಿನ ಮಧ್ಯಾಹ್ನ: ಈ ವಾರದ ಪಾಠದ ಅಧ್ಯಯನಕ್ಕಾಗಿ:ಲೂಕ 16:10, ಯಾಜಕಕಾಂಡ 27:30, ಆದಿಕಾಂಡ 22:1–2, ಇಬ್ರಿಯರಿಗೆ 12:2, ಲೂಕ 11:42, ಇಬ್ರಿಯರಿಗೆ 7:2–10, ನೆಹೆಮಿಯ 13.

**ಸ್ಮರಣವಾಕ್ಯ: 'ಕೆಲವರು ವಾಕ್ಯವನ್ನು ಸುಗುಣವುಳ್ಳ ಒಳ್ಳೆಯ ಹೃದಯದಲ್ಲಿ ಇಟ್ಟುಕೊಂಡು ತಾಳ್ಮೆಯಿಂದ ಫಲವನ್ನು ಕೊಡುತ್ತಾರೆ. ಇವರೇ ಬೀಜ ಬಿದ್ದ ಒಳ್ಳೆಯ ನೆಲವಾಗಿರುವವರು.' (ಲೂಕ 8:15)**

ಪ್ರಾಮಾಣಿಕವಾದ ಹೃದಯ ಎಂದರೆ ಏನು? ಅದು ಹೇಗೆ ಪ್ರಕಟಿಸಲ್ಪಡುತ್ತದೆ?. ಪ್ರಾಮಾಣಿಕತೆಯನ್ನು ವಿವಿಧ ಸಂಸ್ಕೃತಿಗಳು ಸಾಧಿಸಲಾಗದ, ಕಲ್ಪನೆಯ, ಊಹೆ ಎಂದು ಭಾವಿಸುತ್ತಾರೆ; ಯಾಕೆಂದರೆ ಸಾಮಾನ್ಯವಾಗಿ ಎಲ್ಲರೂ ಅಪ್ರಾಮಾಣಿಕರಾಗಿರುತ್ತಾರೆ.ಕೆಲವೊಂದು ಸಮಯಗಳಲ್ಲಿ ಅಪ್ರಾಮಾಣಿಕತೆಯನ್ನು ಒಪ್ಪಿಕೊಳ್ಳಬಹುದು.

ಸತ್ಯ ಮತ್ತು ಪ್ರಾಮಾಣಿಕತೆ ಯಾವಾಗಲೂ ಜೊತೆಯಾಗಿರುತ್ತವೆ. ಆದರೂ ಕೂಡ ನಾವು ಪ್ರಾಮಾಣಿಕರಾಗುವುದು ಸ್ವಾಭಾವಿಕವಾಗಿ ಕಷ್ಟವಾದದ್ದು. ಇದು ಕಲಿಯಬೇಕಾದ ನೈತಿಕ ಗುಣವಾಗಿದೆ ಮತ್ತು ಪಾರುಪತ್ಯಗಾರನ ಮುಖ್ಯ ಗುಣವಾಗಿದೆ.

ನಾವು ಪ್ರಾಮಾಣಿಕತೆಯನ್ನು ಪಾಲಿಸಿದಾಗ ಪ್ರತಿಫಲವಾಗಿ ಒಳ್ಳೆಯ ವಿಷಯಗಳುಬರುತ್ತವೆ. ಉದಾಹರಣೆಗೆ ನಾವು ಸುಳ್ಳು ಹೇಳದೆ ಹೋದರೆ ಅದನ್ನು ಮುಚ್ಚಿ ಹಾಕುವ ಪ್ರಯತ್ನ ಮಾಡಬೇಕಾಗಿಲ್ಲ. ಈ ಕಾರಣ ಮತ್ತು ಅನೇಕ ಕಾರಣಗಳಿಗಾಗಿ ಪ್ರಾಮಾಣಿಕತೆಯು ಬೆಲೆಬಾಳುವ ಗುಣವಾಗಿದೆ. ಶೋಧನೆಗಳು ಜಾಸ್ತಿಯಾದಾಗ ಪ್ರಾಮಾಣಿಕತೆಯು ಬಹಳ ಕಷ್ಟವಾದ ಸ್ವಭಾವವಾಗುತ್ತದೆ.

ಈ ವಾರ ನಾವು ಪ್ರಾಮಾಣಿಕತೆಯ ಆತ್ಮೀಯ ವಿಚಾರಗಳನ್ನು ತಿಳಿದುಕೊಳ್ಳೋಣ ಮತ್ತು ಪಾರುಪತ್ಯಗಾರಿಕೆಯಲ್ಲಿ ದಶಾಂಶ ಯಾಕೆ ಪ್ರಮುಖ ಪಾತ್ರ ವಹಿಸುತ್ತದೆ

ಎಂದು ಕಲಿಯೋಣ.

**ಪಾಠ 7 ದೇವರೊಂದಿಗೆ ಪ್ರಾಮಾಣಿಕತೆ ಫೆಬ್ರುವರಿ 10–16**

**ಭಾನುವಾರ ಫೆಬ್ರುವರಿ 11**

## ಸರಳವಾದ ಪ್ರಾಮಾಣಿಕತೆಯ ವಿಷಯ

ನಮ್ಮೆಲ್ಲರಲ್ಲೂ ಸಾಮಾನ್ಯವಾಗಿರುವ ವಿಷಯವೆಂದರೆ ನಾವು ಯಾರೂ ಕೂಡ ಅಪ್ರಾಮಾಣಿಕತೆಯನ್ನು ಇಷ್ಟಪಡುವುದಿಲ್ಲ. ಅದು ಬೇರೆಯವರ ಜೀವನದಲ್ಲಿ ಕಾಣಿಸುವಾಗ ನಾವು ಇಷ್ಟಪಡುವುದಿಲ್ಲ. ನಮ್ಮಲ್ಲಿ ಅದನ್ನು ನೋಡಿಕೊಳ್ಳುವುದ ಅಷ್ಟು ಸುಲಭವಲ್ಲ. ನಾವು ಅಪ್ರಾಮಾಣಿಕರಾದಾಗ ಅದಕ್ಕೆ ಸಮಂಜಸವಾದ ಉತ್ತರಗಳನ್ನು ಹುಡುಕಿ ಅದನ್ನು ಸಮರ್ಥಿಸಿಕೊಳ್ಳುತ್ತೇವೆ. ಓಹೋ, ಅದು ಅಷ್ಟು ಕೆಟ್ಟದ್ದಲ್ಲ; ಅದೊಂದು ಬಹಳ ಸಣ್ಣ ವಿಷಯ ಅಷ್ಟು ಪ್ರಾಮುಖ್ಯವಲ್ಲ. ಇದರಿಂದ ನಮ್ಮನ್ನು ನಾವು ಮೋಸಗೊಳಿಸಿಕೊಳ್ಳಬಹುದು. ಆದರೆ ದೇವರನ್ನು ನಾವು ಮೋಸಗೊಳಿಸಲು ಸಾಧ್ಯವಿಲ್ಲ.

**‘ಸತ್ಯವನ್ನು ಅನುಸರಿಸಿ ನಡೆಯುವ ಎಲ್ಲರಲ್ಲೂ ಕೂಡ ಉಗುರುಬೆಚ್ಚನೆಯ ಸ್ಥಿತಿಯ ಪರಿಣಾಮವಾಗಿ ಅಪ್ರಾಮಾಣಿಕತೆಯು ಎಲ್ಲಾ ಹಂತಗಳಲ್ಲಿ ಕಾಣಸಿಗುತ್ತದೆ. ಅವರು ಕ್ರಿಸ್ತನ ಜೊತೆಯಲ್ಲಿ ಸಂಬಂಧವನ್ನು ಹೊಂದದೆ ಇದ್ದು ತಮ್ಮನ್ನು ತಾವು ಮೋಸಗೊಳಿಸಿಕೊಳ್ಳುತ್ತಾರೆ.’ ಎಲೆನ್ ಜಿ ವೈಟ್ ಟೆಸ್ಟಿಮೋನಸ್ ಫಾರ್ ದಿ ಚರ್ಚ್ ಸಂಪುಟ 4, ಪುಟ 310.**

**ಲೂಕ 16:10 ನ್ನು ಓದಿರಿ ನಾವು ಚಿಕ್ಕ ಚಿಕ್ಕ ವಿಷಯಗಳಲ್ಲಿ ಪ್ರಾಮಾಣಿಕರಾಗಿರಲು ಯೇಸುವು ಇಲ್ಲಿ ಹೇಳಿರುವ ವಿಚಾರಗಳು ಹೇಗೆ ನಮಗೆ ಸಹಾಯ ಮಾಡುತ್ತದೆ?**

______________________________

______________________________

ನಾವು ಕೆಲವು ವಿಷಯಗಳಲ್ಲಿ ಅಪ್ರಾಮಾಣಿಕರಾಗಿರುತ್ತೇವೆ ಅದರಲ್ಲೂ ನಾವು ಹೊಂದಿರುವ ವಸ್ತುಗಳಲ್ಲಿ ನಾವು ಅಪ್ರಾಮನಿಕತೆಯನ್ನು ತೋರಿಸುತ್ತೇವೆ ಎಂದು ದೇವರಿಗೆ ಗೊತ್ತು. ಆದ್ದರಿಂದ ಆಸ್ತಿಗಳ ವಿಚಾರದಲ್ಲಿ ದೇವರು ಅಪ್ರಾಮಾಣಿಕತೆ



ಮತ್ತು ಸ್ವಾರ್ಥಕ್ಕೆ ಉತ್ತಮವಾದ ಮದ್ದನ್ನು ನೀಡಿದ್ದಾನೆ.

**ಯಾಜಕಕಾಂಡ 27:30 ಮತ್ತು ಮಲಾಕಿ 3:8 ನ್ನು ಓದಿರಿ. ಈ ವಚನಗಳು ನಾವು ಪ್ರಾಮಾಣಿಕರಾಗಿರುವುದಕ್ಕೆ ಹೇಗೆ ನಮಗೆ ಸಹಾಯ ಮಾಡುತ್ತವೆ.**

______________________________

______________________________

ಉದಾರತೆ ಮತ್ತು ಕೃತಜ್ಞತೆಗೆ ಯಾವುದೇ ಮನವಿಯನ್ನು ಮಾಡುವುದಿಲ್ಲ. ಇದೊಂದು ಸರಳವಾದ ಪ್ರಾಮಾಣಿಕತೆ. ದಶಾಂಶದೇವರಿಗೆ ಸೇರಿದ್ದು; ಮತ್ತು ಆತನ ಸ್ವಂತದ್ದನ್ನು ನಾವು ಆತನಿಗೆ ತಿರುಗಿ ಸಲ್ಲಿಸಬೇಕಾಗಿದೆ. ಜೀವನದ ವ್ಯವಹಾರದಲ್ಲಿ ಪ್ರಾಮಾಣಿಕತೆ ಬಹಳ ಮುಖ್ಯವಾದರೆ ದೇವರಿಗೆ ಮತ್ತು ಇತರರ ವಿಷಯದಲ್ಲಿ ನಾವು ಎಷ್ಟು ಜಾಗ್ರತೆಯಾಗಿ ಇರಬೇಕಾಗುತ್ತದೆ?? ಎಲೆನ್ ಜಿ ವೈಟ್, ಎಜುಕೇಶನ್, ಪುಟ 139.)

ನಾವು ಹೊಂದಿರುವ ಎಲ್ಲಾ ವಸ್ತುಗಳು ದೇವರಿಗೆ ಸೇರಿದವುಗಳಾಗಿವೆ ಎಂಬುದನ್ನು ದಶಮಭಾಗದ ಮೂಲಕ ನಾವು ಹೇಗೆ ಜ್ಞಾಪಕದಲ್ಲಿಟ್ಟುಕೊಳ್ಳಬಹುದು.? ನಾವು ಹೊಂದಿರುವ ಎಲ್ಲಾ ವಸ್ತುಗಳು ಕೂಡ ನಮಗೆ ಸೇರಿದವಲ್ಲ ಎಂದು ತಿಳಿದುಕೊಳ್ಳುವುದು ಎಷ್ಟು ಮುಖ್ಯವಾದದ್ದು?

**ಪಾಠ 7 ದೇವರೊಂದಿಗೆ ಪ್ರಾಮಾಣಿಕತೆ ಫೆಬ್ರವರಿ 10–16**

**ಸೋಮವಾರ ಫೆಬ್ರವರಿ 12**

## ನಂಬಿಕೆಯ ಜೀವನ

**ಆದಿಕಾಂಡ 22:1–12 ನ್ನ ಓದಿರಿ ಅಬ್ರಹಾಮನ ನಂಬಿಕೆಯ ವಾಸ್ತವತೆಯನ್ನು ಈ ವಚನಗಳು ಹೇಗೆ ವಿವರಿಸುತ್ತವೆ?**

______________________________

______________________________

ನಂಬಿಕೆಯ ಜೀವನ ಒಮ್ಮೆ ನಡೆಯುವ ಘಟನೆಯಲ್ಲ. ನಾವು ಒಂದು ಬಾರಿ ಪ್ರಬಲವಾಗಿ ನಮ್ಮ ನಂಬಿಕೆಯನ್ನು ಪ್ರದರ್ಶಿಸುವುದಿಲ್ಲ, ಬದಲಿಗೆ ನಾವು ಕ್ರಿಸ್ತನ ರಕ್ತದಿಂದ ಮತ್ತು ಆತನ ಕೃಪೆಯಿಂದ ರಕ್ಷಿಸಲ್ಪಟ್ಟಿರುವುದರಿಂದ ಅನುದಿನವು ಅದು ನಮ್ಮ ಜೀವನದ ಭಾಗವಾಗುತ್ತದೆ.

ಉದಾಹರಣೆಗೆ,ಅಬ್ರಹಾಮನು ಮೋರಿಯ ಬೆಟ್ಟದಲ್ಲಿ ತೋರಿಸಿದ ನಂಬಿಕೆಯನ್ನು ನೋಡಿ ಸಾವಿರಾರು ವರ್ಷಗಳ ನಂತರವೂ ಕೂಡ ಧಾರ್ಮಿಕ ಪ್ರಪಂಚವು ಬೆರಗಾಗುತ್ತದೆ. (ಆದಿಕಾಂಡ 22). ಅದರೂ, ಈ ನಂಬಿಕೆಯು ಅಬ್ರಹಾಮನು ಬೇಕಾದಾಗ ಮಾತ್ರ ತೋರಿಸುವ ಕ್ರಿಯೆಯಾಗಿರಲಿಲ್ಲ. ಅವನ ಇಡೀ ಜೀವನವು ಆ ಸನ್ನಿವೇಶದಲ್ಲಿ ಅವನು ತೋರಿಸಿದ ವಿಶ್ವಾಸಕ್ಕೆ ಸಾದೃಶ್ಯವಾಗಿತ್ತು. ಈ ಸನ್ನಿವೇಶಕ್ಕೆ ಮೊದಲು ಅವನು ಅನೇಕ ಬಾರಿ ಅಪನಂಬಿಕೆಯನ್ನು ತೋರಿಸಿದ್ದ. ಒಂದು ವೇಳೆ ಆ ರೀತಿ ನಡೆಯದೆ ಹೋಗಿದ್ದರೆ ಈ ಕೊನೆಯ ಪರೀಕ್ಷೆಯಲ್ಲಿ ಅವನು ಸೋಲುತ್ತಿದ್ದ. ಇಂತಹ ಮನುಷ್ಯನು ಈ ಘಟನೆಯ ನಂತರವೂ ಕೂಡ ತನ್ನ ವಿಶ್ವಾಸ ಜೀವನವನ್ನು ಮುಂದುವರೆಸಿಕೊಂಡು ಹೋಗಿರುತ್ತಾನೆ ಎಂಬುದರಲ್ಲಿ ಯಾವುದೇ ಪ್ರಶ್ನೆಯಿಲ್ಲ.

ಪಾರುಪತ್ಯಗಾರನ ನಂಬಿಕೆಯು ಕೂಡ ಒಂದು ಸಮಯದಲ್ಲಿ ನಡೆಯುವ ಘಟನೆಯಲ್ಲ. ಅದನ್ನು ಒಬ್ಬನು ಯಾವ ರೀತಿಯಲ್ಲಿ ಅಭ್ಯಾಸ ಮಾಡಿಕೊಂಡು ಹೋಗುತ್ತಾನೆ ಅದರ ಮೇಲೆ ಆಧಾರವಾಗಿದ್ದು, ಅನೇಕ ಬಾರಿ, ಅದು ಆಳವಾಗಿ ಮತ್ತು ಬಲವಾಗಿ ಬೆಳೆಯುತ್ತದೆ ಅಥವಾ ಬಲಹೀನವಾಗಿ ಮತ್ತು ಕ್ಷೀಣಿಸುತ್ತಾ ಹೋಗುತ್ತದೆ.

**ಇಬ್ರಿಯರಿಗೆ 12:2 ನ್ನು ಓದಿರಿ ನಮ್ಮ ನಂಬಿಕೆಯ ಮೂಲ ಯಾರು ಮತ್ತು ಅದನ್ನು ಹೇಗೆ ಹೊಂದುವದು?**

________________________________________

________________________________________

ನಂಬಿಕೆಯ ಪಾರುಪತ್ಯಗಾರರಾಗಿ ನಮಗಿರುವ ಒಂದೇ ಸಂಪನ್ಮೂಲವೆಂದರೆ "ನಂಬಿಕೆಯನ್ನು ಹುಟ್ಟಿಸುವವನೂ, ಪೂರೈಸುವವನೂ" ಆಗಿರುವ ಯೇಸುವಿನ ಮೇಲೆ ದೃಷ್ಟಿಯಿಟ್ಟು ನಮಗೆ ನೇಮಕವಾದ ಓಟವನ್ನು ಸ್ಥಿರಚಿತ್ತದಿಂದ ಓಡೋಣ. ಆತನು ತನ್ನ ಮುಂದೆ ಇಟ್ಟಿದ್ದ ಸಂತೋಷಕ್ಕೋಸ್ಕರ ಅವಮಾನವನ್ನು ಅಲಕ್ಷ್ಯ ಮಾಡಿ ಶಿಲುಬೆಯ ಮರಣವನ್ನು ಸಹಿಸಿಕೊಂಡು ದೇವರ ಸಿಂಹಾಸನದ ಬಲಗಡೆಯಲ್ಲಿ ಆಸನಾರೂಢನಾಗಿದ್ದಾನೆ. (ಇಬ್ರಿಯರಿಗೆ 12:2)



'ಪೂರೈಸುವವನೂ' ಎಂಬ ಪದವನ್ನು ಹೊಸ ಒಡಂಬಡಿಕೆಯಲ್ಲಿ ಈ ಸನ್ನಿವೇಶದಲ್ಲಿ ಮಾತ್ರ ಉಪಯೋಗಿಸಲಾಗಿದೆ. ಇದನ್ನು 'ಪರಿಪೂರ್ಣಗೋಳಿಸುವವನು' ಎಂಬುದಾಗಿ ಭಾಷಾಂತರ ಮಾಡಬಹುದು. ಇದರ ಅರ್ಥ ಯೇಸುವು ನಮ್ಮಲ್ಲಿರುವ ನಂಬಿಕೆಯನ್ನು ಪ್ರೌಢಮಿಗೆ ತರಲು ಮತ್ತು ಪೂರ್ಣಗೊಳಿಸಲು ಬಯಸುತ್ತಾನೆ. (ಇಬ್ರಿಯರಿಗೆ 6:1,2) ಇದರಿಂದ ನಂಬಿಕೆಯು, ನಂಬಿಕೆಯ ಜೀವನವುಕ್ರಿಯಾತ್ಮಕ ಅನುಭವ; ಅದು ಬೆಳೆಯುತ್ತದೆ, ಪ್ರೌಢಿಮೆಗೆ ಬರುತ್ತದೆ ಮತ್ತು ಅದು ಅಭಿವೃದ್ಧಿ ಹೊಂದುತ್ತದೆ.

**ನಿಮ್ಮ ಸ್ವಂತ ನಂಬಿಕೆಯು ಹೇಗೆ ಅಭಿವೃದ್ಧಿ ಹೊಂದಿದೆ ಮತ್ತು ಅದು ಹೇಗೆ ಬೆಳೆದಿದೆ ಎಂಬುದನ್ನು ಆಲೋಚಿಸಿರಿ?**

**ಪಾಠ 7 ದೇವರೊಂದಿಗೆ ಪ್ರಾಮಾಣಿಕತೆ ಫೆಬ್ರವರಿ 10–16**

**ಮಂಗಳವಾರ ಫೆಬ್ರವರಿ 13**

## ನಂಬಿಕೆಯ ವ್ಯಾಖ್ಯಾನ

ನಾವು ನಿನ್ನೆಯ ದಿನ ಓದಿದ ಹಾಗೆ ನಂಬಿಕೆಯು ಒಂದು ಪ್ರಕ್ರಿಯೆ, ಕ್ರಿಯಾತ್ಮಕವಾದ ಅನುಭವವಾಗಿದ್ದು ಅದು ಬೆಳೆದು, ಮತ್ತು ಪ್ರೌಢಿಮೆಗೆ ಬರುತ್ತದೆ. ಒಂದು ವಿಧಾನದಲ್ಲಿ ನಮ್ಮ ವಿಶ್ವಾಸವನ್ನು ಪೂರ್ಣಗೊಳಿಸಿ ದಶಮಭಾಗದ ಮೂಲಕ ಅದನ್ನು ಪರಿಪೂರ್ಣತೆಗೆ ತರುತ್ತಾನೆ. ದೇವರಿಗೆ ದಶಮಭಾಗವನ್ನು ಕೊಡುವುದು ಕರ್ಮ ಪ್ರಾದಾನ್ಯತೆಯಲ್ಲ. ದಶಮಭಾಗದ ಮೂಲಕ ನಾವು ಪರಲೋಕದ ಸ್ಥಾನವನ್ನು ಕೊಂಡುಕೊಳ್ಳುತ್ತಿಲ್ಲ. ಬದಲಿಗೆ ದಶಾಂಶ ನಮ್ಮ ನಂಬಿಕೆಯ ವ್ಯಾಖ್ಯಾನವಾಗಿದೆ. ಅದು ನಮ್ಮ ನಂಬಿಕೆಯ ಮುಕ್ತವಾದ, ಪ್ರತ್ಯಕ್ಷವಾದ, ಮತ್ತು ವ್ಯಯಕ್ತಿಕವಾದ ವಾಸ್ತವತೆಯಾಗಿದೆ.

ಕೊನೆಗೆ, ದೇವರಲ್ಲಿ ನಂಬಿಕೆ ಇಟ್ಟಿದ್ದೇನೆ ಎಂದು ಹೇಳುವ ಮತ್ತು ಕ್ರಿಸ್ತನಲ್ಲಿ ನಂಬಿಕೆ ಇಡುವ ವ್ಯಕ್ತಿಯು ನಮಗೆ ಗೊತ್ತಿರುವ ಪ್ರಕಾರ "ದೆವ್ವಗಳು ಕೂಡ ದೇವರನ್ನು ನಂಬುತ್ತವೆ."(ಯಾಕೋಬನು 2:19) ತನ್ನ ಆದಾಯದಲ್ಲಿ ಹತ್ತನೆಯ ಭಾಗವನ್ನು

ತೆಗೆದುಕೊಂಡು ದೇವರಿಗೆ ಕೊಡುವುದು ಎಂದರೆ ಏನು? ಇದು ಕೇವಲ ನಂಬಿಕೆಯ ಕ್ರಿಯೆಯಾಗಿದೆ.

**ಲೂಕ 11:42 ನ್ನು ಓದಿರಿ, ದಶಮಭಾಗವನ್ನು ಕಡೆಗಣಿಸಬಾರದು ಎಂದು ಇಲ್ಲಿ ಯೇಸುವು ಹೇಗೆ ಹೇಳುತ್ತಾನೆ.? ಆಜ್ಞೆಗಳ ಭಾರದಲ್ಲಿ ದಶಾಂಶ ಹೇಗೆ ಸೇರಿಕೊಂಡಿದೆ?**

ದೇವರ ಮೇಲೆ ನಾವು ಅಧಾರವಾಗಿರುವುದು ಮತ್ತು ಕ್ರಿಸ್ತನು ನಮ್ಮ ವಿಮೋಚಕನು ಎಂದು ದೀನತೆಯಿಂದ ವ್ಯಕ್ತಪಡಿಸುವುದೇ ದಶಮಭಾಗವಾಗಿದೆ. ನಾವು ಕ್ರಿಸ್ತನಲ್ಲಿ ಈಗಾಗಲೇ 'ಕ್ರಿಸ್ತನಲ್ಲಿ ಎಲ್ಲಾ ಆತ್ಮೀಯ ಆಶೀರ್ವಾದಗಳನ್ನು ಹೊಂದಿದ್ದೇವೆ' (ಎಫೆಸ 1:3) ಆಶೀರ್ವಾದ ಹೊಂದಿದ್ದೇವೆ ಎಂದು ದಶಮಭಾಗದ ಮೂಲಕ ತೋರಿಸುತ್ತೇವೆ.

ಆದಿಕಾಂಡ 28:14–22 ದೇವರ ವಾಗ್ದಾನಕ್ಕೆ ಯಾಕೋಬನ ಪ್ರತಿಕ್ರಿಯೆ ಏನಾಗಿದೆ?

**'ದಶಾಂಶವಿಧಾನವು ದೇವರ ಸರಳ ಮತ್ತು ಸಮಾನತೆಯ ಸುಂದರವಾದ ವ್ಯವಸ್ಥೆಯಾಗಿದೆ. ಇದರಲ್ಲಿ ಎಲ್ಲರೂ ಧೈರ್ಯದಿಂದ ಭಾಗವಹಿಸಬಹುದು ಯಾಕೆಂದರೆ ಅದು ದೈವಿಕ ಮೂಲವನ್ನು ಹೊಂದಿದೆ.ಇದರಲ್ಲಿ ಸರಳತೆ ಮತ್ತು ಉಪಯುಕ್ತತೆಯು ಸೇರಿಕೊಂಡಿದೆ. ಇದನ್ನು ನೆರವೇರಿಸಲು ನಾವು ವಿಶೇಷವಾದ ಜ್ಞಾನವನ್ನು ಹೊಂದಬೇಕಾಗಿಲ್ಲ. ಪ್ರತಿಯೊಬ್ಬರೂ ಕೂಡ ಸುವಾರ್ತೆಯ ಕೆಲಸದಲ್ಲಿ ಭಾಗಿಯಾಗಬಹುದು ಎಂಬುದನ್ನು ಇದು ತೋರಿಸುತ್ತದೆ.ಪ್ರತಿಯೊಬ್ಬ ಪುರುಷನು, ಸ್ತ್ರೀಯು, ಮತ್ತು ಯೌವನಸ್ಥರು ದೇವರ ಖಜಾಂಚಿಗಳಾಗಬಹುದು, ಮತ್ತು ಹಣಕಾಸಿನ ಅವಶ್ಯಕತೆಗಳನ್ನು ಪೂರೈಸುವ ಪ್ರತಿನಿಧಿಗಳಾಗಬಹುದು.' ಎಲೆನ್ ಜಿ ವೈಟ್, ಕೌನ್ಸಿಲ್ ಆನ್ ಸ್ಟೀವರ್ಡ್ ಶಿಪ್ ಪುಟ 73.**

ದೇವರಿಗೆ ದಶಮಭಾಗವನ್ನು ಹಿಂತಿರುಗಿ ನೀಡುವುದರ ಮೂಲಕ ನೀವು ಯಾವ ರೀತಿಯ ಆತ್ಮೀಯ ಆಶೀರ್ವಾದಗಳನ್ನು ಹೊಂದಿದ್ದೀರಿ? ದಶಮಭಾಗವನ್ನು ಕೊಡುವುದು ನಮ್ಮ ನಂಬಿಕೆಯನ್ನು ಯಾವ ರೀತಿಯಲ್ಲಿ ವೃದ್ಧಿಗೊಳಿಸಿದೆ.

**ಪಾಠ 7 ದೇವರೊಂದಿಗೆ ಪ್ರಾಮಾಣಿಕತೆ ಫೆಬ್ರವರಿ 10–16**

**ಬುಧವಾರ ಫೆಬ್ರವರಿ 14**



## ಪ್ರಾಮಾಣಿಕ ದಶಮಭಾಗ: ದೇವರಿಗೆ ಮೀಸಲಾದದ್ದು.

ನಾವು ಯಾವಾಗಲೂ ದೇವರಿಗೆ ದಶಾಂಶ ನೀಡುವುದಾಗಿ ಮಾತನಾಡುತ್ತೇವೆ. ಆದರೆ ದೇವರಿಗೆ ಸೇರಿದ್ದನ್ನು ಮತ್ತೆ ಹೇಗೆ ನಾವು ದೇವರಿಗೆ ಕೊಡಲು ಸಾಧ್ಯ?

**ಯಾಜಕಕಾಂಡ 27:30 ನ್ನು ದಶಮಭಾಗದ ಕುರಿತಾಗಿ ಇಲ್ಲಿ ಯಾವ ಪ್ರಮುಖವಾದ ವಿಷಯವನ್ನು ಹೇಳಲಾಗಿದೆ.?**

---

ದಶಾಂಶ ದೇವರಿಗೆ ಸೇರಿದ್ದು ಮತ್ತು ಅದು ಆತನಗೆ ಮೀಸಲು. ಅದು ಒಂದು ಶಪಥ ಅಥವಾ ಪ್ರತಿಷ್ಠೆಯ ಮೂಲಕ ಪರಿಶುದ್ದವಾಗುವುದಿಲ್ಲ. ಅದು ತನ್ನ ಸ್ವಭಾವದ ಮೂಲಕ ಪರಿಶುದ್ದವಾದದ್ದು. ಅದು ದೇವರಿಗೆ ಸಲ್ಲಬೇಕಾದದ್ದು. ದೇವರನ್ನು ಬಿಟ್ಟು ಬೇರೆ ಯಾರಿಗೂ ಅದರ ಮೇಲೆ ಅಧಿಕಾರವಿಲ್ಲ. ಅದನ್ನು ದೇವರಿಗೆ ಯಾರು ಪ್ರತಿಷ್ಠೆ ಪಡಿಸಲು ಸಾಧ್ಯವಿಲ್ಲ. ಯಾಕೆಂದರೆ **ದಶಮ ಭಾಗವು ಯಾರೊಬ್ಬರ ವ್ಯಯಕ್ತಿಕ ಆಸ್ತಿಯಲ್ಲ. ಅಂಗೆಲ್ ಮ್ಯಾನೆಲ್ ರೋಡ್ರಿಗ್ಸ್,** ಸ್ಟೀವರ್ಡ್ ಶಿಪ್ ರೂಟ್ಸ್ (ಸಿಲ್ವರ್ ಸ್ಪ್ರಿಂಗ್, ಎಂ ಡಿ.; ಸ್ಟೀವರ್ಡ್ ಶಿಪ್ ಮಿನಿಸ್ಟರೀಸ್ ಡಿಪಾರ್ಟ್ಮೆಂಟ್, 1994), ಪುಟ 52.

ನಾವು ದಶಮಭಾಗವನ್ನು ಪರಿಶುದ್ದವಾಗಿಸುವುದಿಲ್ಲ, ದೇವರು ಅದನ್ನು ಪ್ರತ್ಯೇಕ ಪಡಿಸುವುದರ ಮೂಲಕ ಅದನ್ನು ಪರಿಶುದ್ದವಾಗಿಸುತ್ತಾನೆ. ಆತನಗೆ ಆ ರೀತಿಯ ಅಧಿಕಾರವಿದೆ. ಪಾರುಪತ್ಯಗಾರರಾಗಿ, ಆತನಗೆ ಸೇರಿದ್ದನ್ನು ನಾವು ಆತನಗೆ ತಿರುಗಿ ಸಲ್ಲಿಸುತ್ತೇವೆ. ದಶಾಂಶವು ಪ್ರತ್ಯೇಕವಾದ ಕಾರ್ಯಕ್ಕಾಗಿ ಮೀಸಲಾದದ್ದು. ಅದನ್ನು ಬೇರೆ ಯಾವುದೇ ಕಾರ್ಯಗಳಿಗಾಗಿ ಉಪಯೋಗಿಸುವುದು ಅಥವಾ ತಡೆಹಿಡಿಯುವುದು ಅಪ್ರಾಮಾಣಿಕತಯಾಗುತ್ತದೆ. ದೇವರಿಗೆ ದಶಾಂಶವನ್ನು ಹಿಂತಿರುಗಿಸುವುದನ್ನು ನಾವು ಎಂದಿಗೂ ಮುರಿಯಬಾರದು.

ಇಬ್ರಿಯರಿಗೆ 7:2–10ನ್ನು ಓದಿರಿ; ಇಲ್ಲಿ ಪೌಲನು ಹೇಳುವ ಹಾಗೆ ಅಬ್ರಹಾಮನು ಮೇಲ್ಕಿಜೆದೆಕನಿಗೆ ದಶಾಂಶವನ್ನು ಕೊಡುವುದು ಯಾವ ವಿಶೇಷತೆಯನ್ನು ತೋರಿಸುತ್ತದೆ? ಅಬ್ರಹಾಮನು ಯಾರಿಗೆ ದಶಾಂಶವನ್ನು ಸಲ್ಲಿಸಿದನು.?

ಆದ್ದರಿಂದ ಸಬ್ಬತ್ ಯಾವ ರೀತಿಯಲ್ಲಿ ಪರಿಶುದ್ದವಾದದ್ದೋ ದಶಾಂಶವು ಕೂಡ ಪರಿಶುದ್ದವಾದದ್ದು. "ಪರಿಶುದ್ದ" ಎನ್ನುವ ಪದದ ಅರ್ಥ ವಿಶೇಷ ಕಾರ್ಯಕ್ಕಾಗಿ ಪ್ರತ್ಯೇಕಪಡಿಸುವುದು. ಸಬ್ಬತ್ ಮತ್ತು ದಶಾಂಶ ಈ ರೀತಿಯಲ್ಲಿ ಜೊತೆಯಾಗಿವೆ. ನಾವು ಏಳನೇಯ ದಿನದ ಸಬ್ಬತ್ ನ್ನು ಪರಿಶುದ್ದವಾದ ದಿನವಾಗಿ ಪ್ರತ್ಯೇಕ ಪಡಿಸುತ್ತೇವೆ ಮತ್ತು ಆದಾಯದ ಹತ್ತನೆಯ ಒಂದು ಭಾಗವನ್ನು ದೇವರ ಆಸ್ತಿಯಾಗಿ ಅದು ಪರಿಶುದ್ದವಾಗಿರುವುದರಿಂದ ಅದನ್ನು ಪ್ರತ್ಯೇಕಪಡಿಸುತ್ತೇವೆ.

ದೇವರು ಏಳನೇಯ ದಿನವನ್ನು ಪರಿಶುದ್ದ ಮಾಡಿದ್ದಾನೆ. ಸಮಯದ ಒಂದು ಭಾಗವನ್ನು ದೇವರು ತಾನೇ ಧಾರ್ಮಿಕ ಆರಾಧನೆಗೆ ನಮ್ಮ ಸೃಷ್ಟಿ ಕರ್ತನು ಏದೇನನ ಮೊದಲ ವಾರದಿಂದ ಇಂದಿನ ದಿನದವರೆಗೂ ಕೂಡ ಪ್ರತ್ಯೇಕ ಪಡಿಸಿದ್ದಾನೆ.

ಅದೇ ರೀತಿಯಲ್ಲಿ ನಮ್ಮ ಆದಾಯದ ಹತ್ತನೆಯ ಒಂದು ಭಾಗ "ದೇವರಿಗೆ ಪರಿಶುದ್ದವಾದದ್ದು" ಹೊಸ ಒಡಂಬಡಿಕೆಯು ಸಬ್ಬತ್ತಿನ ಪರಿಶುದ್ದತೆಯನ್ನು ಯಾವ ರೀತಿಯಲ್ಲಿ ಎತ್ತಿ ಹಿಡಿಯುತ್ತದೋ ಅದೇ ರೀತಿಯಲ್ಲಿ ದಶಾಂಶ ಪರಿಶುದ್ದತೆಯನ್ನು ಎತ್ತಿ ಹಿಡಿಯುತ್ತದೆ. ಯಾಕೆಂದರೆ ಈ ಎರಡರ ಸಿಂಧುತ್ವವನ್ನು ಊಹಿಸಲಾಗಿದೆ, ಮತ್ತು ಅದರ ಆಳವಾದ ಆತ್ಮೀಯ ಅರ್ಥವನ್ನು ವಿವರಿಸಲಾಗಿದೆ.... ದೇವರ ಸ್ವಂತ ಸಮಯವನ್ನು ನಾವು ನಂಬಿಕೆಯಿಂದ ಹೇಗೆ ಆತನಿಗೆ ತಿರುಗಿ ನೀಡಲು ಬಯಸುತ್ತೇವೋ ಹಾಗೆಯೇ ಆತನಿಗೆ ಮೀಸಲಾಗಿರುವ ಆತನ ಆಸ್ತಿಯ ಭಾಗವನ್ನು ಆತನಿಗೆ ತಿರುಗಿ ನೀಡುವ ಹಂಗಿನಲ್ಲಿ ನಾವಿದ್ದೇವಲ್ಲಾ?? ಎಲೆನ್ ಜಿ ವೈಟ್, ಕೌನ್ಸಲ್ ಆನ್ ಸ್ಟೀವರ್ಡ್ ಶಿಪ್ ಪುಟ 66.

**ದಶಾಂಶವು ಪರಿಶುದ್ಧವಾದದ್ದು ಎಂಬ ಆಲೋಚನೆಯು ನಮ್ಮ ಹೃದಯ ಮತ್ತು ಮನಸ್ಸಿನಲ್ಲಿ ಯಾವ ರೀತಿಯ ವಾಸ್ತವತೆಯನ್ನು ನಿಮಗೆ ಉಂಟುಮಾಡುತ್ತದೆ.?**

**ಪಾಠ 7 ದೇವರೊಂದಿಗೆ ಪ್ರಾಮಾಣಿಕತೆ ಫೆಬ್ರವರಿ 10–16**

**ಗುರುವಾರ ಫೆಬ್ರವರಿ 15**

## ಉಜ್ಜೀವನ, ಧಾರ್ಮಿಕ ಸುಧಾರಣೆ, ಮತ್ತು ದಶಾಂಶ.

ಯೂದಾ ಕುಲದ ಆಳ್ವಿಕೆಯಲ್ಲಿ ಹಿಜ್ಕಿಯನ ದೀರ್ಘವಾದ ಆಳ್ವಿಕೆಯು ಬಹಳ



ಉನ್ನತವಾದ ಆಳ್ವಿಕೆ ಎಂಬುದಾಗಿ ಪರಿಗಣಿಸಲ್ಪಟ್ಟಿತ್ತು. ದಾವಿದನ ಮತ್ತು ಸೋಲೋಮನ ಆಳ್ವಿಕೆಯ ನಂತರ ಜನರು ಇಷ್ಟೊಂದು ಸುಖ ಶಾಂತಿಯನ್ನು ಅನುಭವಿಸಿರಲಿಲ್ಲ. 2 ಪೂರ್ವಕಾಲವೃತ್ತಾಂತ 29–31 ರಲ್ಲಿ ಹಿಜ್ಕಿಯನ ಉಜ್ಜೀವನ ಮತ್ತು ಧಾರ್ಮಿಕ ಸುಧಾರಣೆಯನ್ನು ನೋಡುತ್ತೇವೆ. 'ಅವನು ಯೆಹೋವನ ಚಿತ್ತಾನುಸಾರವಾಗಿ ನಡೆದನು' (2 ಪೂರ್ವಕಾಲವೃತ್ತಾಂತ 29:2). 'ದೇವರ ಆಲಯವನ್ನು ಸರಿಪಡಿಸಿದನು' (2ಪೂರ್ವಕಾಲವೃತ್ತಾಂತ 29:35).'ಪಸ್ಕಹಬ್ಬವನ್ನು ಆಚರಿಸಲಾಯಿತು.'(2 ಪೂರ್ವಕಾಲವೃತ್ತಾಂತ 30:5). 'ಯೇರುಷಲೆಮಿನಲ್ಲಿ ಬಹುಸಂತೋಷವುಂಟಾಯಿತು' (2ಪೂರ್ವಕಾಲವೃತ್ತಾಂತ 30:26). ಅನ್ಯರ ದೇವರುಗಳ ವಿಗ್ರಹಗಳು, ಯಜ್ಞವೇದಿಗಳು, ಮತ್ತು ಪೂಜಾಸ್ಥಳಗಳನ್ನು ನಾಶಪಡಿಸಲಾಯಿತು. (2ಪೂರ್ವಕಾಲವೃತ್ತಾಂತ 31 :1). ಅಲ್ಲಿ ಹಠಾತ್ತಾಗಿ ಹೃದಯದ ಉಜ್ಜೀವನ ಮತ್ತು ಅಭ್ಯಾಸದ ಧಾರ್ಮಿಕ ಸುಧಾರಣೆ ಉಂಟಾಯಿತು. ಇದರ ಫಲವಾಗಿ ಅಪಾರವಾದ ದಶಾಂಶ ಮತ್ತು ಕಾಣಿಕೆಗಳ ಸಂಗ್ರಹಣೆಯಾಯಿತು. (2ಪೂರ್ವಕಾಲವೃತ್ತಾಂತ 31 :4,5,12).

**ನೆಹೇಮಿಯನು ಮತ್ತೊಂದು ಉಜ್ಜೀವನ, ಧಾರ್ಮಿಕ ಸುಧಾರಣೆಯ ಮತ್ತು ದಶಾಂಶದ ಉದಾಹರಣೆಯನ್ನು ನೀಡುತ್ತಾನೆ. (ನೆಹೇಮಿಯ 9:2,3.) ಹೃದಯದ ಉಜ್ಜೀವನ ಎಂದರೆ ಏನು? ನೆಹೇಮಿಯ 13. ನೆಹೇಮಿಯನು 'ದೇವರ ಆಲಯವನ್ನು' (ನೆಹೇಮಿಯ 13:4) ಸುಧಾರಣೆಗೊಳಿಸಿದ ನಂತರ ಯೂದ ಜನಾಂಗದವರು ಅಲ್ಲಿಗೆ ಏನು ತೆಗೆದುಕೊಂಡು ಬಂದರು, (ನೆಹೇಮಿಯ 13:12),**

**'ಉಜ್ಜೀವನ ಮತ್ತು ಸುಧಾರಣೆ ಎರಡೂ ವಿಭಿನ್ನ ವಿಷಯಗಳು. ಉಜ್ಜೀವನವು ಅಧ್ಯಾತ್ಮಿಕ ಜೀವನದ ನವೀಕರಣವನ್ನು ತೋರಿಸುತ್ತದೆ. ಅದು ಮನಸ್ಸಿನ ಮತ್ತು ಹೃದಯದ ಶಕ್ತಿಗಳನ್ನು ಎಚ್ಚರಿಸುತ್ತದೆ, ಅಧ್ಯಾತ್ಮಿಕ ಸಾವಿನಿಂದ ಪುನರುತ್ಥಾನ ಗೊಳಿಸುತ್ತದೆ. ಸುಧಾರಣೆಯು ಪುನರಾವರ್ತನೆಗೆ ನಡೆಸುತ್ತದೆ. ಅದು ಯೋಚನೆ, ವಾದಗಳು, ಅಭ್ಯಾಸಗಳು ಮತ್ತು ಹವ್ಯಾಸಗಳಲ್ಲಿ ಬದಲಾವಣೆಯನ್ನು ತರುತ್ತದೆ'. ಎಲೆನ್ ಜಿ ವೈಟ್ ಕ್ರಿಶ್ಚಿಯನ್**

**ಸರ್ವಿಸ್, ಪುಟ 42.**

ಉಜ್ಜೀವನ, ಸುಧಾರಣೆ, ಮತ್ತು ದಶಾಂಶದ ಸಂಬಂಧವು ಸ್ವಾಭಾವಿಕವಾದದ್ದು. ದಶಾಂಶವನ್ನು ಕೊಡದೆ ಇದ್ದರೆ ಉಜ್ಜೀವನ ಮತ್ತು ಸುಧಾರಣೆಯು ಉಗುರುಬೆಚ್ಚಗಿನ ಅನುಭವವಾಗುತ್ತದೆ. ದೇವರ ಪಕ್ಷದಲ್ಲಿ ನಿಂತು ಕ್ರಿಯಾತ್ಮಕವಾಗಿ ಕೆಲಸ ಮಾಡುವ ಬದಲು ಕೆಲವೊಂದು ಬಾರಿ ನಾವು ಜಡತ್ವವಾಗಿ ಪಕ್ಕದಲ್ಲಿ ನಂತು ನೋಡುತ್ತಾ ಇರುತ್ತೇವೆ. ಉಜ್ಜೀವನ ಮತ್ತು ಸುಧಾರಣೆಯು ಬದ್ಧತೆಯನ್ನು ಬಯಸುತ್ತದೆ, ದಶಾಂಶವು ಅಂತಹ ಬದ್ದತೆಯನ್ನು ತೋರಿಸುತ್ತದೆ. ದೇವರು ನಮ್ಮಿಂದ ಏನು ಕೇಳುತ್ತಾನೋ ಅದನ್ನು ನಾವು ಹಿಡಿದಿಟ್ಟುಕೊಂಡರೆ, ನಾವು ಕೇಳುವುದನ್ನು ಆತನು ಕೊಡುತ್ತಾನೆ ಎಂದು ನಾವು ನಿರೀಕ್ಷಿಸಲು ಸಾಧ್ಯವಿಲ್ಲ.

ಉಜ್ಜೀವನ ಮತ್ತು ಸುಧಾರಣೆ ಸಭೆಯ ಒಳಗಡೆ ನಡೆಯುತ್ತದೆ, ಹೊರತು ಸಭೆಯ ಹೊರಗೆ ನಡೆಯುವುದಿಲ್ಲ (ಕೀರ್ತನೆ 85:6) ಉಜ್ಜೀವನಕ್ಕಾಗಿ ನಾವು ದೇವರನ್ನು ಹುಡುಕಬೇಕು (ಕೀರ್ತನೆ 80:19), ಮತ್ತು ಸುಧಾರಣೆಯು 'ನೀನು ಎಲ್ಲಿ ಬಿದ್ದಿದ್ದಿಯೋ ಅಲ್ಲಿ' ಪ್ರಾರಂಭವಾಗುತ್ತದೆ. (ಪ್ರಕಟಣೆ 2:5). ಸುಧಾರಣೆಯು ನಾವು ಏನು ಇಟ್ಟುಕೊಳ್ಳುತ್ತೇವೆ ಮತ್ತು ನಾವು ದೇವರಿಗೆ ಏನು ನೀಡುತ್ತೇವೆ ಎಂಬುದರಿಂದ ಪ್ರಾರಂಭವಾಗಬೇಕು.

ನಮ್ಮ ಕಾರ್ಯವು ವ್ಯತ್ಯಾಸವನ್ನು ತರುವುದಿಲ್ಲ, ಆದರೆ ನಮ್ಮ ಮನಸ್ಸಿನ ಮತ್ತು ಭಾವನೆಗಳ ತಿರ್ಮಾನಗಳು ನಮ್ಮ ಉದ್ದೇಶಗಳನ್ನು ಮತ್ತು ಬದ್ಧತೆಯನ್ನು ತೋರಿಸುತ್ತದೆ. ಇದರ ಪ್ರತಿಫಲವಾಗಿ ನಂಬಿಕೆಯು ವೃದ್ಧಿಯಾಗುತ್ತದೆ, ಆತ್ಮೀಯ ದೃಷ್ಟಿ ಮೆರುಗುಗೊಳ್ಳುತ್ತದೆ ಮತ್ತು ನವೀಕರಣದ ಪ್ರಾಮಾಣಿಕತೆ ಬರುತ್ತದೆ.

**ಪಾಠ 7 ದೇವರೊಂದಿಗೆ ಪ್ರಾಮಾಣಿಕತೆ ಫೆಬ್ರವರಿ 10–16**

**ಶುಕ್ರವಾರ ಫೆಬ್ರವರಿ 16**

## ಹೆಚ್ಚಿನ ಚಿಂತನೆ :

ಸತ್ಯವೇದದಲ್ಲಿ ಕಾಣುವ ಎಲ್ಲಾ ಒಡಂಬಡಿಕೆಗಳನ್ನು ದೇವರು ತಾನೇ ಆರಂಭಿಸಿ ತನ್ನ ಜನರು ಅವುಗಳನ್ನು ಕೈಕೊಂಡು ನಡೆಯುವಂತೆ ಆತನು ಅವರನ್ನು ತನ್ನ



ಬಳಿಗೆ ಸೆಳೆಯುತ್ತಾನೆ. (ಇಬ್ರಿಯರಿಗೆ 8:10). ಒಡಂಬಡಿಕೆಯು ಆತನ ಕೃಪೆ, ಪ್ರೀತಿ, ಮತ್ತು ನಮ್ಮನ್ನು ರಕ್ಷಿಸಲು ಆತನು ತೋರುವ ತವಕವನ್ನು ಬಿಂಬಿಸುತ್ತದೆ.

ದೇವರೊಂದಿಗೆ ಒಡಂಬಡಿಕೆಯು ಅನೇಕ ವಿಚಾರಗಳನ್ನು ಒಳಗೊಂಡಿದೆ. ದೇವರು, ಫಲಾನುಭವಿ, ಒಡಂಬಡಿಕೆಯ ಷರತ್ತುಗಳು, ಎರಡೂ ಕಡೆಯವರಿಂದ ಷರತ್ತುಗಳನ್ನು ಕಾಪಾಡುವ ಬದ್ಧತೆ, ಒಂದು ವೇಳೆ ಅವುಗಳನ್ನು ಮೀರಿದರೆ ಬರುವ ಶಿಕ್ಷೆ, ಮತ್ತು ಅದರಿಂದ ಎದುರು ನೋಡಬಹುದಾದ ಫಲಿತಾಂಶಗಳು ಮತ್ತು ಪ್ರಯೋಜನಗಳು. ಮಲಾಕಿ 3:9, 10,ರಲ್ಲಿ ದಶಾಂಶದ ನಿಯಮಗಳನ್ನು ಉಲ್ಲೇಖಿಸಲಾಗಿದೆ. ಈ ವಚನವು ದೇವರು ಮತ್ತು ಆತನ ಪಾರುಪತ್ಯಗಾರನ ನಡುವೆ ಇರುವ ಒಡಂಬಡಿಕೆಯನ್ನು ತೋರಿಸುತ್ತದೆ. ನಾವು ಅಂತಹ ಒಡಂಬಡಿಕೆಯಲ್ಲಿ ಭಾಗಿಯಾದಾಗ ನಾವು ಭೌತಿಕವಾದ ವಿರುದ್ದವಾಗಿ ನಡೆದುಕೊಳ್ಳುತ್ತೇವೆ, ಮತ್ತು ಪರಿವರ್ತನೆ ಹೊಂದಿದ ಹೃದಯದಿಂದ ಒಳ್ಳೆಯದನ್ನು ನಾವು ನರೀಕ್ಷಿಸಬಹುದು.

ಸ್ವಾರ್ಥದ ಮತ್ತು ಸಂಕುಚಿತವಾದ ಮನಸ್ಸು ದೇವರಿಗೆ ಸೇರಿದ್ದನ್ನು ಆತನಗೆ ನೀಡಲು ನಿರಾಕರಿಸುತ್ತದೆ. ದೇವರು ಮನುಷ್ಯರೊಂದಿಗೆ ಒಡಂಬಡಿಕೆಯನ್ನು ಮಾಡಿಕೊಂಡಿದ್ದಾನೆ, 'ಕ್ರಿಸ್ತನ ರಾಜ್ಯದ ವಿಸ್ತರಣೆಗಾಗಿ ಅವರು ತಮ್ಮ ಆದಾಯದ ಒಂದು ಭಾಗವನ್ನು ಪ್ರತ್ಯೇಕ ಪಡಿಸಿದರೆ ದೇವರುಬಹಳವಾಗಿ ಅಂದರೆ ಅವರಲ್ಲಿ ಸ್ಥಳ ಹಿಡಿಸಲಾರದಷ್ಟು ಆಶೀರ್ವಾದಗಳನ್ನು ಸುರಿಸುತ್ತಾನೆ.' ಎಲೆನ್ ಜಿ ವೈಟ್, ಕೌನ್ಸೆಲ್ ಆನ್ ಸ್ಟೀವರ್ಡ್‌ಶಿಪ್ ಪುಟ 77.

ದೇವರೊಂದಿಗೆ ಒಡಂಬಡಿಕೆಯಲ್ಲಿ ಜೀವಿಸುವುದರಲ್ಲಿ ಜವಾಬ್ದಾರಿಯಿದೆ. ನಾವು ಒಡಂಬಡಿಕೆಯ ವಾಗ್ದಾನಗಳನ್ನು ಅನುಭವಿಸುತ್ತೇವೆ, ಆದರೆ ಷರತ್ತು ಮತ್ತು ಜವಾಬ್ದಾರಿಗಳನ್ನು ಮರೆಯುತ್ತೇವೆ. ಆದರೂ ಕೂಡ ಈ ಹಿನ್ನಲೆಯಲ್ಲಿ ಒಡಂಬಡಿಕೆಯು ಎರಡೂ ಕಡೆಯ ಒಪ್ಪಂದ ಮತ್ತು ದಶಾಂಶವು ಆ ಒಪ್ಪಂದದ ಅಡಿಯಲ್ಲಿ ಜೀವಿಸುವ ಒಂದು ಭಾಗವಾಗಿದೆ.

ಚರ್ಚಿಸಬೇಕಾದ ಪ್ರಶ್ನೆಗಳು:

1. ನಂಬಿಕೆಯಲ್ಲಿ ದಶಾಂಶವನ್ನು ಹಿಂತಿರುಗಿಸುವುದು ಯಾಕೆ ಅಷ್ಟು ಪ್ರಾಮುಖ್ಯವಾದದ್ದು. ?

2. 'ನಾನು ದಶಮಾಂಶವನ್ನು ಕೊಡಲು ಸಾಧ್ಯವಾಗುತ್ತಿಲ್ಲ' ಎಂದು ಹೇಳುವವರಿಗೆ ನೀವು ಯಾವ ಸಲಹೆಯನ್ನು ನೀಡುವಿರಿ? ಈ ಪರಿಸ್ಥಿತಿಯಲ್ಲಿ ಅವನಿಗೆ ಅಥವಾ ಅವಳಿಗೆ ನೀವು ಹೇಗೆ ಸಹಾಯ ಮಾಡುವಿರಿ? ಮಾತುಗಳನ್ನು ಹೊರೆತು ಪಡಿಸಿ ಅವರಿಗೆ ನೀವು ಯಾವ ರೀತಿಯ ಸಹಾಯವನ್ನು ನೀಡಬಹುದು?

3. ಬುಧವಾರದ ಕೊನೆಯ ಪ್ರಶ್ನೆಯ ಪ್ರಕಾರ 'ದಶಾಂಶವು ಪರಿಶುದ್ದವಾದದ್ದು' ಎಂಬ ಆಲೋಚನೆಯನ್ನು ನಮ್ಮ ಮುಂದೆ ಇಟ್ಟುಕೊಂಡಾಗ ನೀವು ಏನು ಮಾಡುವಿರಿ.? ನಿಮ್ಮ ಉತ್ತರ ಏನು? ದಶಾಂಶವು ಪರಿಶುದ್ದವಾದದ್ದು ಎಂಬ ವಿಷಯವು ನೀವು ದೇವರಿಗೆ ಸಲ್ಲಿಸುವ ನಿಮ್ಮ ಮನಸ್ಥಿತಿಯನ್ನು ಯಾವ ರೀತಿಯಲ್ಲಿ ಬದಲಾಯಿಸುತ್ತದೆ.?